# ವಾರ್ಡ್‌–195 ಕೋಣನಕುಂಟೆ, ವಾರ್ಡ್ ಸಮಿತಿಯ ಮಾಹೆಯಾನೆ

# ಸಭೆಯು ನಡಾವಳಿಗಳು

ದಿನಾಂಕ: 05–01–2018 ರ ಸಮಯ 11–00 ಗಂಟೆ ಪೂರ್ವಾಹ್ನದಂದು ವಾರ್ಡ್ ಸಂಖ್ಯೆ 195 ರ ವಾರ್ಡ್ ಸಮಿತಿಯ ಸಭೆಯನ್ನು ಶ್ರೀಮತಿ.ಎಸ್.ಶಶಿರೇಖಾ ಜಯರಾಮ್ ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಬೃಬೆಂ.ಮ.ಪಾಲಿಕೆ ಸದಸ್ಯರ ಅದ್ಯಕ್ಷತೆಯಲ್ಲಿ ನಡೆಸಲಾಗಿರುವ ಸಭೆಯ ನಡಾವಳಿಗಳು

## ಹಾಜರಿದ್ದ ಸದಸ್ಯರು

1. ಶ್ರೀ.ಜಿ.ವಿ.ಹೆಬ್ಬಾರ್ ಸದಸ್ಯರು
2. ಶ್ರೀ.ಕೆಂಪರಾಜು ಸದಸ್ಯರು
3. ಶ್ರೀ.ಆನಂತ ಪದ್ಮನಾಭ ಸದಸ್ಯರು
4. ಶ್ರೀ.ಸದಾಶಿವ ಸದಸ್ಯರು
5. ಶ್ರೀ.ನೀರಜ್ ಕುಮಾರ್ ಸದಸ್ಯರು
6. ಶ್ರೀಮತಿ.ಪ್ರಭಾ ಸಿ ಗೌಡರ್ ಸದಸ್ಯರು
7. ಶ್ರೀಮತಿ.ಕುಮಾರಿ ವೆಂಕಟೇಶ್ ಸದಸ್ಯರು
8. ಶ್ರೀ.ಶಿವಕುಮಾರ್ ಸದಸ್ಯರು
9. ಶ್ರೀಮತಿ.ಜ್ಯೋತಿ ಕೃಷ್ಣಯ್ಯ ಸದಸ್ಯರು
10. ಶ್ರೀ.ಪ್ರಕಾಶ್.ಎನ್ ಸದಸ್ಯರು

## ಹಾಜರಿದ್ದ ಅಧಿಕಾರಿಗಳು

1. ಶ್ರೀ.ರಮೇಶ್ ಸ.ಕಂ.ಅ(ಯಲಚೇನಹಳ್ಳಿ) ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ (ವಾರ್ಡ್ ನಂ 195 ಬಿಬಿಎಂಪಿ)
2. ಶ್ರೀ.ಎನ್.ಕದಿರಪತಿ ಸಹಾಯಕ ಅಭಿಯಂತರರು (ವಾರ್ಡ್ ನಂ 195 ಬಿಬಿಎಂಪಿ)
3. ಶ್ರೀಮತಿ.ಶೋಭಾ ಹಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ ನಂ 195 ಬಿಬಿಎಂಪಿ)

## ವಾರ್ಡ್ 195 ಕೋಣನಕುಂಟೆ ವಾರ್ಡ್ ಸಮಿತಿ ಸಭೆಯಲ್ಲಿ ಈ ಕೆಳಕಂಡ ವಿಷಯುಗಳ ಬಗ್ಗೆ ಚರ್ಚಿಲಾಗಿರುತ್ತದೆ.

1. ಸದಸ್ಯರಾದ ಶ್ರೀ.ಜಿ.ವಿ.ಹೆಬ್ಬಾರ್ ಸದಸ್ಯರುರವರು ಸಭೆಯಲ್ಲಿ ಮಾತನಾಡಿ
   * ಅಪಾರ್ಟ್‌ಮೆಂಟ್‌ನಲ್ಲಿ ಸ್ವಚ್ಚತೆ ಮತ್ತು ವೇಸ್ಟ್ ಪ್ಲಾಸ್ಟಿಕ್ ನ್ನು ವಿಲೇವಾರಿ ಬಗ್ಗೆ ಹಾಗೂ ಬೀದಿ ಸ್ವಚ್ಚತೆ ಮಾಡಲು ಪೌರಕಾರ್ಮಿಕರು ಕಡಿಮೆ ಸಂಖ್ಯೆಯಲ್ಲಿರುತ್ತಾರೆ ಆದುದರಿಂದ ಪೌರಕಾರ್ಮಿಕ ಸಂಖ್ಯೆ ಹೆಚ್ಚಿಸುವ ಸಂಬಂಧ ಸಭೆಯಲ್ಲಿ ಹಾಜರಾಗಿದ್ದ ಶ್ರೀ.ಎನ್.ಕದರಪತಿ ಸಹಾಯಕ ಅಭಿಯಂತರರು ಮತ್ತು ಶ್ರೀಮತಿ.ಶೋಭಾ ಹಿರಿಯ ಆರೋಗ್ಯ ಪರಿವೀಕ್ಷಕರು ಗಮನಕ್ಕೆ ತಂದು ಕಾರ್ಯವನ್ನು ಅತಿ ಜರೂರಾಗಿ ಮಾಡುವಂತೆ ಸಮಿತಿಯು ಸಮ್ಮಿತಿಸಿದೆ.

2. ಸದಸ್ಯರಾದ ಶ್ರೀ.ಆನಂತ ಪದ್ಮನಾಭ ರವರು ಮಾತನಾಡಿ

* ಪುಟ್ಟೇನಹಳ್ಳಿ ಸಾರಕ್ಕೆ ಕೆರೆಯಲ್ಲಿ ಅಭಿವೃದ್ಧಿ ಕೆಲಸ ನಡೆಯುತ್ತಿದ್ದು ಇದರಲ್ಲಿ ಒಡಾಡುವ ಪಕ್ಕದ ರಸ್ತೆ ಮೇಲೆ ಮಣ್ಣು ಬಿದ್ದಿರುವುದರಿಂದ ಇದೇ ರಸ್ತೆಯಲ್ಲಿ ವಾಹನಗಳು ಒಡಾಟ ಇರುವುದರಿಂದ ಇದರ ಧೂಳಿನಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಸಂಬಂಧಪಟ್ಟ ಕೆರೆ ಪ್ರಾಧಿಕಾರ ರವರಿಗೆ ಪತ್ರ ವ್ಯವಹಾರ ಮಾಡಲು ಸಭೆಯಲ್ಲಿ ಹಾಜರಿದ್ದ ಶ್ರೀ.ಎನ್.ಕದರಪತಿ ಸಹಾಯಕ ಅಭಿಯಂತರರು ಗಮನಕ್ಕೆ ತಂದು ಕಾರ್ಯವನ್ನು ಅತಿ ಜರೂರಾಗಿ ಮಾಡುವಂತೆ ಸಮಿತಿಯು ಸಮ್ಮತಿಸಿದೆ.

3. ಸದಸ್ಯರಾದ ಶ್ರೀ.ನೀರಜ್ ಕುಮಾರ್ ರವರು ಮಾತನಾಡಿ ಬೆಸ್ಕಾಂ, ಬಿಬಿಎಂಪಿ ಅರಣ್ಯ ಇಲಾಖೆ. ಬಿಡಬ್ಲ್ಯೂಎಸ್ಎಸ್‌ಬಿ ಮತ್ತು ಸಂಬಂಧಪಟ್ಟ ಸಂಚಾರ ಪೋಲೀಸ್ ಠಾಣೆ, ರವರಿಗೆ ಪತ್ರ ಬರೆದು ಮುಂದಿನ ಸಮಿತಿ ಸಭೆಗೆ ಹಾಜರಾಗಲು ಸಹ ಕಂದಾಯ ಅಧಿಕಾರಿ ಯಲಚೇನಹಳ್ಳಿ ಹಾಗೂ ಸಮಿತಿ ಕಾರ್ಯದರ್ಶಿಯವರಿಗೆ ಅತಿ ಜರೂರಾಗಿ ಪತ್ರ ಬರೆದು ಸಭೆಯಲ್ಲಿ ತಿಳಿಸಲಾಗಿದ್ದು ಹಾಗೂ ಇದಕ್ಕೆ ಸಭೆಯು ಸಮ್ಮತಿಸಿದೆ.

4. ಎಲ್ಲಾ ಸದಸ್ಯರು ಮಾತಾನಾಡುತ್ತಾ ವಾರ್ಡ್ ನಂ –195 ಕೋಣನಕುಂಟೆ ವಾರ್ಡ್‌ನ್ನು ಪ್ಲಾಸ್ಟಿಕ್ ಮುಕ್ತ ವಾರ್ಡ್ ಮಾಡುವ ಬಗ್ಗೆ ಎಲ್ಲಾ ಸದಸ್ಯರು ಪ್ರತಿಜ್ಞೆ ಮಾಡಿರುತ್ತಾರೆ.

5. ವಾರ್ಡ್ 195 ರಲ್ಲಿ ಇರುವ ಖಾಲಿನಿವೇಶನಗಳ ಬಗ್ಗೆ ಅಂಕಿ ಸಂಖ್ಯೆಗಳಲ್ಲಿ ನೀಡಿದ್ದಲ್ಲಿ ಸದರಿ ಸ್ವತ್ತಿನ ಮಾಲೀಕರನ್ನು ಪತ್ತೆ ಹಚ್ಚುವುದಾಗಿ ಹಾಗೂ ಸ್ವಚ್ಚಗೊಳಿಸುವ ಕುರಿತು ಸ್ವತ್ತಿನ ಮಾಲೀಕರ ಗಮನಕ್ಕೆ ತರಲಾಗುವುದು ಎಂದು ಕಮಿಟಿಯಲ್ಲಿ ಹಾಜರಾದ ಎಲ್ಲಾ ಸದಸ್ಯರು ಸಭೆಯಲ್ಲಿ ತೀರ್ಮಾನಿಸಲಾಗಿದ್ದು ಇದಕ್ಕೆ ಸಭೆಯು ಸಮ್ಮತಿಸಿದೆ.

6. ವಾರ್ಡ್ 195 ರಲ್ಲಿ ಪಾರ್ಕ್‌ಗಳ ಅಭಿವೃದ್ಧಿ ಕುರಿತು ಪರಿಸರ ಪ್ರಜ್ಞೆ ಮೂಡಿಸುವ ಕುರಿತು ಚರ್ಚಿಸಲಾಗಿತ್ತು.

7. ವಾರ್ಡ್ 195 ನಲ್ಲಿರುವ ಅಸೋಸಿಯೇಷನ್ಸ್ ರವರ ದೂರವಾಣಿ ಸಂಖ್ಯೆ ಇಟ್ಟುಕೊಳ್ಳುವಂತೆ ಸಂಬಂಧಪಟ್ಟ ಸಹ ಕಂದಾಯ ಅಧಿಕಾರಿ ರವರಿಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರು ತಿಳಿಸಿರುತ್ತಾರೆ. ಇದಕ್ಕೆ ಸಭೆಯು ಸಮ್ಮತಿಸಿದೆ.

8. ವಿದ್ಯುತ್ ಕಂಬಗಳ ತಂತಿಗಳು ಮರಗಳ ಮಧ್ಯೆದಲ್ಲಿ ಹಾದುಹೋಗುವ ಸ್ಥಳದಲ್ಲಿ ಸಂಬಂಧಪಟ್ಟ ಬೆಸ್ಕಾಂ ರವರು ಮರಗಳನ್ನು ಕಡೆದು ಅಲ್ಲೆ ಬಿಟ್ಟುಹೋಗಿರುವುದು ಹಲವು ಕಡೆ ಕಂಡುಬಂದಿರುತ್ತದೆ. ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ವಿದ್ಯುತ್ ದುರಸ್ತಿ ಇದ್ದಲ್ಲಿ ವಿದ್ಯುತ್ ತಗೆಯುವ ಮುಂಚೆ ಸಂಬಂಧಪಟ್ಟ ಅಸೋಸಿಯೇಷನ್ ರವರ ಗಮನಕ್ಕೆ ತಂದು ವಿದ್ಯುತ್ ದುರಸ್ತಿ ಮಾಡುವಂತೆ ಸಂಬಂಧಪಟ್ಟ ಇಲಾಖೆರವರಿಗೆ ಗಮನಕ್ಕೆ ತರಲು ಹಾಗೂ ಸಮ್ಮಿತಿ ಸಭೆಗೆ ಹಾಜರಾಗಲು ಸಂಬಂಧಪಟ್ಟ ಇಲಾಖೆಯವರಿಗೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಗಿ ಹಾಗೂ ಇದಕ್ಕೆ ಸಭೆಯು ಸಮ್ಮತಿಸಿದೆ.

9. ಸದಸ್ಯರಾದ ಶ್ರೀ.ಸದಾಶಿವರವರು ಸರ್ಕಾರದಿಂದ ಬಡಜನರಿಗೆ ಒಂಟಿಮನೆ ನಿರ್ಮಾಣ ಮಾಡಲಾಗುತ್ತಿದ್ದು ಇದಕ್ಕೆ ಬಾಕಿ ಇರುವ ಬಿಲ್ಲನ್ನು ಅರ್ಜಿದಾರರಿಗೆ ಪಾವತಿಸಲು ವಿಳಂಬ ಇರುವ ಕಾರಣ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಬಿಲ್ ಪಾವತಿಸಲು ಕೋರಿರುವ ಮೇರೆಗೆ ಸಭೆಯಲ್ಲಿ ಹಾಜರಾಗಿದ್ದ ಶ್ರೀ.ಎನ್.ಕದರಪತಿ ಸಹಾಯಕ ಅಭಿಯಂತರವರಿಗೆ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಗೆ ಅತಿ ಜರೂರಾಗಿ ಬಿಲ್ ಪಾವತಿಮಾಡುವಂತೆ ಗಮನಕ್ಕೆ ತರುವಂತೆ ಸಮಿತಿಯು ಸಮ್ಮಿತಿಸಿದೆ.

* ಬೀದಿ ವ್ಯಾಪಾರ ಮಾಡುವ ವ್ಯಾಪಾರಿಗಳಿಂದ ಮುಖ್ಯರಸ್ತೆಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸಂಚಾರ ಪೋಲೀಸ್ ಠಾಣೆಗೆ ದೂರು ನೀಡಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಪೋಲೀಸ್ ಇಲಾಖೆಗೆ ಪತ್ರ ಬರೆಯಬೇಕೆಂದು ತಿಳಿಸಿರುವ ಮೇರೆಗೆ ಸಹ ಕಂದಾಯ ಅಧಿಕಾರಿ ಯಲಚೇನಹಳ್ಳಿ ಹಾಗೂ ಸಮಿತಿ ಕಾರ್ಯದರ್ಶಿಯವರಿಗೆ ಅತಿ ಜರೂರಾಗಿ ಪತ್ರ ಬರೆಯಲು ಸಭೆಯಲ್ಲಿ ತಿಳಿಸಲಾಗಿದ್ದು ಹಾಗೂ ಇದಕ್ಕೆ ಸಭೆಯು ಸಮ್ಮತಿಸಿದೆ.
* ಕೊತ್ತನೂರು ಗ್ರಾಮದ ಸಶ್ಮಾನದಲ್ಲಿ ಸ್ವಚ್ಚತೆ ಬಗ್ಗೆ ಗಮನ ಹರಿಸಬೇಕೆಂದು ಶ್ರೀ.ಎನ್.ಕದರಪತಿ ಸಹಾಯಕ ಅಭಿಯಂತರವರಿಗೆ ತಿಳಿಸಲಾಗಿದ್ದು ಅಭಿಯಂತರರು ಅದಷ್ಟು ಬೇಗ ಸ್ವಚ್ಚತೆ ಬಗ್ಗೆ ಗಮನಹರಿಸುತ್ತೇನೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

10. ಶ್ರೀಮತಿ.ಕುಮಾರಿ ವೆಂಕಟೇಶ್ ರವರು ಮಾತನಾಡಿ ಪುಟ್ಟಮ್ಮ ಲೇಔಟ್ ನಲ್ಲಿ ಕಸವಿಲೇವಾರಿ ಮತ್ತು ಬೀದಿ ದೀಪ ಮತ್ತು ರಾತ್ರಿ ವೇಳೆ ಕೆಲ ಯುವಕರು ಪುಂಡಾಟಿಕೆ ನಿಯಂತ್ರಿಸುವಬೇಕೆಂದು ತಿಳಿಸಿರುವ ಮೇರೆಗೆ ಶ್ರೀ.ಎನ್.ಕದರಪತಿ ಸಹಾಯಕ ಅಭಿಯಂತರು ಮತ್ತು ಸಹ ಕಂದಾಯ ಅಧಿಕಾರಿ ಯಲಚೇನಹಳ್ಳಿ ಹಾಗೂ ಸಮಿತಿ ಕಾರ್ಯದರ್ಶಿರವರು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದು ಗಮನ ಹರಿಸುತ್ತೇನೆ ಎಂದು ತಿಳಿಸಿರುತ್ತಾರೆ.

ಮೇಲ್ಕಂಡಂತೆ ತೀರ್ಮಾನ ಕೈಗೊಂಡು ಸಭೆಯನ್ನು ಮುಕ್ತಗೊಳಿಸಲಾಯಿತು.

| ಪದನಾಮ | ಸಹಿ |
|---|---|
| ಶ್ರೀ.ಜಿ.ವಿ.ಹೆಬ್ಬಾರ್ ಸದಸ್ಯರು | |
| ಶ್ರೀ.ಕೆಂಪರಾಜು ಸದಸ್ಯರು | T. Kimparaju |
| ಶ್ರೀ.ಆನಂತ ಪದ್ಮನಾಭ ಸದಸ್ಯರು | [signature] |
| ಶ್ರೀ.ಸದಾಶಿವ ಸದಸ್ಯರು | [signature] |
| ಶ್ರೀ.ನೀರಜ್ ಕುಮಾರ್ ಸದಸ್ಯರು | |
| ಶ್ರೀಮತಿ.ಪ್ರಭಾ ಸಿ ಗೌಡರ್ ಸದಸ್ಯರು | [signature] |
| ಶ್ರೀಮತಿ.ಕುಮಾರಿ ವೆಂಕಟೇಶ್ ಸದಸ್ಯರು | |
| ಶ್ರೀ.ಶಿವಕುಮಾರ್ ಸದಸ್ಯರು | |
| ಶ್ರೀಮತಿ.ಜ್ಯೋತಿ ಕೃಷ್ಣಯ್ಯ ಸದಸ್ಯರು | |
| ಶ್ರೀ.ಪ್ರಕಾಶ್.ಎನ್ ಸದಸ್ಯರು | N. [signature] |

| ಪದನಾಮ | ಸಹಿ |
|---|---|
| ಶ್ರೀ.ರಮೇಶ್ ಸ.ಕಂ.ಅ (ಯಲಚೇನಹಳ್ಳಿ) | [signature] |
| ಶ್ರೀ.ಎನ್.ಕದರಪತಿ ಸಹಾಯಕ ಅಭಿಯಂತರರು | |
| ಶ್ರೀಮತಿ.ಶೋಭಾ ಹಿರಿಯ ಆರೋಗ್ಯ ಪರಿವೀಕ್ಷಕರು | |

[signature]

ಅಧ್ಯಕ್ಷರು ಹಾಗೂ 195
ವಾರ್ಡ್ ಸದಸ್ಯರು ಬೃಬೆಂ.ಮ.ಪಾಲಿಕೆ